## ನಿಮ್ಮೊಡನೆ

# ಭಾವಾವೇಶದ ಮಾತು-ಕೃತಿಗಳಿನ್ನು ಸಾಕು ಕನ್ನಡದ ಬೇರು-ಕವಲು ಭದ್ರಪಡಿಸಬೇಕು

ಪುಟ್ಟ ಸಮುದಾಯದ ಚೌಕಟ್ಟಿಗೆ ಸೀಮಿತವಾದ ಭಾಷೆಗೆ ಕೂಡ ಅಪೂರ್ವ ಚೆಲುವಿರುತ್ತದೆ. ಆ ಕಾರಣದಿಂದಾಗಿ ಯಾರಾದರೂ ಭಾಷೆಯೊಂದನ್ನು ಶ್ರೇಷ್ಠ ಅಥವಾ ಕೀಳು ಎಂದಾಗ ನಕ್ಕು ನಿರ್ಲಕ್ಷಿಸಬೇಕೇ ಹೊರತು ತೋಳೇರಿಸುವುದಲ್ಲ. ಭಾವುಕತೆ ಹಾಗೂ ಕುರುಡು ಅಭಿಮಾನದಿಂದ ಭಾಷೆ ಬೆಳೆಯುವುದಿಲ್ಲ.

‘ವಿಶ್ವದ ಅತ್ಯಂತ ಕುರೂಪಿ ಭಾಷೆ ಯಾವುದು?’ ಎನ್ನುವ ಪ್ರಶ್ನೆಗೆ ‘ಕನ್ನಡ’ ಎಂದು ಉತ್ತರಿಸಿದ್ದ ವೆಬ್‌ಸೈಟೊಂದರ ಕೊಂಡಿ ತೋರಿಸುತ್ತಿದ್ದ ಗೂಗಲ್ ಬಗ್ಗೆ ಕನ್ನಡಿಗರು ಪ್ರತಿಭಟನೆ ದಾಖಲಿಸಿ, ಆ ಪುಟವನ್ನು ಜಾಲಜಗತ್ತಿನಿಂದ ತೆಗೆಸಿಹಾಕಿದ್ದಾರೆ. ‘ಲಿಪಿಗಳ ರಾಣಿ’ ಎಂದು ವಿನೋಬಾ ಭಾವೆ ಅವರು ಕನ್ನಡವನ್ನು ಬಣ್ಣಿಸಿದ್ದನ್ನು ಉಲ್ಲೇಖಿಸಿ, ವಿಶ್ವದ ಭಾಷೆಗಳ ರಾಣಿ ಎಂದು ಕನ್ನಡವನ್ನು ಬಿಂಬಿಸುವ ಪ್ರಯತ್ನಗಳು ನಡೆದಿವೆ. ಕನ್ನಡದ ಹಿತಾಸಕ್ತಿಗೆ ಭಂಗ ಬಂದಾಗ ಇಂಥ ಪ್ರತಿಭಟನೆ ಹಾಗೂ ಬಣ್ಣನೆ ಅನಿವಾರ್ಯ. ಆದರೆ, ನಗಣ್ಯ ಎನ್ನಬಹುದಾದ ವಿಷಯವೊಂದಕ್ಕೆ ದೊಡ್ಡ ಹುಯಿಲೆಬ್ಬಿಸುವ ನಾವು ಕನ್ನಡದ ದೇಹವನ್ನು ಒಳಗಿನಿಂದಲೇ ಕೊರೆಯುತ್ತಿರುವ ವೈರಸ್‌ಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ.

ಯಾವುದಾದರೊಂದು ಭಾಷೆಯನ್ನು ಕುರೂಪಿ ಅಥವಾ ಸೌಂದರ್ಯದ ರಾಣಿ ಎನ್ನುವ ಮನಸ್ಥಿತಿ ಸರಿಯಾದುದಲ್ಲ. ಪ್ರತಿಯೊಂದು ಭಾಷೆಗೂ ಅದರದೇ ಆದ ಅನನ್ಯತೆ ಹಾಗೂ ಸೌಂದರ್ಯವಿರುತ್ತದೆ. ಭಾಷೆಯೊಂದನ್ನು ಎಷ್ಟು ಜನ ಬಳಸುತ್ತಾರೆ ಎನ್ನುವುದರ ಮೇಲೆ ಅದರ ಶ್ರೇಷ್ಠತೆಯನ್ನು ಅಳೆಯುವುದು ಮೂರ್ಖತನ. ಸೌಂದರ್ಯ ಸ್ಪರ್ಧೆ ನಡೆಸಿ, ಯುವತಿಯೊಬ್ಬಳನ್ನು ಸುಂದರಿ ಎಂದು ಕಿರೀಟ ತೊಡಿಸುವುದು ಮಾರುಕಟ್ಟೆಯ ಗಣಿತ ಆಗಬಹುದೇ ಹೊರತು, ವಸ್ತುಸ್ಥಿತಿಯಾಗಿರುವುದಿಲ್ಲ. ಹಾಗೆಯೇ ಭಾಷೆಯೊಂದರ ಹೆಚ್ಚು ಬಳಕೆ ಮಾರುಕಟ್ಟೆ ಜಗತ್ತಿನ ಲೆಕ್ಕಾಚಾರ ಆಗಿರುತ್ತದೆಯೇ ಹೊರತು ಅದರ ಚೆಲುವು ಅಥವಾ ಅನನ್ಯತೆಯ ಮಾನದಂಡವಾಗಿರುವುದಿಲ್ಲ. ಪುಟ್ಟ ಸಮುದಾಯದ ಚೌಕಟ್ಟಿಗೆ ಸೀಮಿತವಾದ ಭಾಷೆಗೆ ಕೂಡ ಅಪೂರ್ವ ಚೆಲುವಿರುತ್ತದೆ. ಆ ಕಾರಣದಿಂದಾಗಿ ಯಾರಾದರೂ ಭಾಷೆಯೊಂದನ್ನು ಶ್ರೇಷ್ಠ ಅಥವಾ ಕೀಳು ಎಂದಾಗ ನಕ್ಕು ನಿರ್ಲಕ್ಷಿಸಬೇಕೇ ಹೊರತು ತೋಳೇರಿಸುವುದಲ್ಲ. ಭಾವುಕತೆ ಹಾಗೂ ಕುರುಡು ಅಭಿಮಾನದಿಂದ ಭಾಷೆ ಬೆಳೆಯುವುದಿಲ್ಲ. ಪ್ರಜ್ಞಾಪೂರ್ವಕ ಪ್ರಯತ್ನಗಳಿಂದಷ್ಟೇ ಭಾಷಾವೃಕ್ಷದ ಕೊಂಬೆರೆಂಬೆಗಳು ವಿಸ್ತಾರವಾಗುತ್ತವೆ. ದುರದೃಷ್ಟವಶಾತ್, ಬೇರು ಭದ್ರಪಡಿಸುವುದರ ಜೊತೆಗೆ ಕೊಂಬೆರೆಂಬೆಗಳ ಹಬ್ಬಿಸುವ ಕೆಲಸ ಕನ್ನಡದ ಮಟ್ಟಿಗೆ ನಿರೀಕ್ಷಿತ ಪ್ರಮಾಣದಲ್ಲಿ ನಡೆಯುತ್ತಿಲ್ಲ.

ಗೂಗಲ್ ಅವಿವೇಕದ ಬಗ್ಗೆ ಸಿಟ್ಟಾಗುವ ನಾವು, ಭಾರತ ಸರ್ಕಾರದ ಎಷ್ಟು ಅಂತರ್ಜಾಲ ತಾಣಗಳಲ್ಲಿ ಕನ್ನಡದಲ್ಲಿ ವಿವರಗಳಿವೆ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳುವುದಿಲ್ಲ ಅಥವಾ ಆ ಪ್ರಶ್ನೆ ನಮಗೆ ಮುಖ್ಯವೆನ್ನಿಸುವುದಿಲ್ಲ. 2020ರ ನವೆಂಬರ್ 1ರಿಂದ 2021ರ ಅಕ್ಟೋಬರ್ 31ರವರೆಗಿನ ಅವಧಿಯನ್ನು ‘ಕನ್ನಡ ಕಾಯಕ ವರ್ಷ’ವನ್ನಾಗಿ ಆಚರಿಸುವುದಾಗಿ ಹೇಳಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಘೋಷಣೆ ಎಷ್ಟು ಜನಕ್ಕೆ ನೆನಪಿದೆ? 65ನೇ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡದ ನಾಳೆಗಳ ಬಗ್ಗೆ ಹುಮ್ಮಸ್ಸಿನಿಂದ ಮಾತನಾಡಿದ್ದ ಅವರು, ತಂತ್ರಜ್ಞಾನ ಯುಗದಲ್ಲಿ ಕನ್ನಡದ ಬಳಕೆ ಮತ್ತು ಭಾಷೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ‘ಕನ್ನಡ ಕಾಯಕ ವರ್ಷ’ದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದ್ದರು. ಅದಾಗಿ ಎಂಟು ತಿಂಗಳು ಕಳೆದರೂ ‘ಕಾಯಕ ವರ್ಷ’ ಆಚರಣೆಯ ಸ್ಪಷ್ಟ ಕಾರ್ಯಸೂಚಿಯೇ ರೂಪುಗೊಂಡಂತಿಲ್ಲ. ಕಾಯಕ ವರ್ಷದ ಘೋಷಣೆಯ ಸಂದರ್ಭದಲ್ಲೇ, 2020–21ನೇ ಸಾಲಿನಲ್ಲಿ ಅಕಾಡೆಮಿ, ಪ್ರಾಧಿಕಾರಗಳಿಗೆ ನೀಡುವ ಅನುದಾನವನ್ನು ಸರ್ಕಾರ ಕಡಿತಗೊಳಿಸಿದೆ. ಬರಗೂರು ರಾಮಚಂದ್ರಪ್ಪನವರು ಸಿದ್ಧಪಡಿಸಿದ್ದ ಸಾಂಸ್ಕೃತಿಕ ನೀತಿ ವರದಿಯನ್ನು ಜಾರಿಗೊಳಿಸುವ ನಿರ್ಧಾರ 2017ರಿಂದ ನೆನೆಗುದಿಯಲ್ಲಿದೆ. ಆಡಳಿತ ಪಕ್ಷ ಬದಲಾದಂತೆ ವಿವಿಧ ಅಕಾಡೆಮಿ ಹಾಗೂ ಪರಿಷತ್ತುಗಳ ಪದಾಧಿಕಾರಿಗಳು ಬದಲಾಗುವುದನ್ನು ತಪ್ಪಿಸುವುದು ಯಾವ ಸರ್ಕಾರಕ್ಕೂ ಬೇಕಾದಂತಿಲ್ಲ.

ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವುದು ಸೇರಿದಂತೆ, ಹೆಚ್ಚಿನ ಉದ್ಯೋಗಾವಕಾಶಗಳು ಕನ್ನಡಿಗರಿಗೆ ದೊರೆಯುವ ನಿಟ್ಟಿನಲ್ಲಿ ಕ್ರಿಯಾಯೋಜನೆಯೊಂದನ್ನು ರೂಪಿಸುವುದು ಈ ಹೊತ್ತಿನ ಅಗತ್ಯ. ಬ್ಯಾಂಕುಗಳು ಸೇರಿದಂತೆ ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡೇತರರೇ ತುಂಬಿಕೊಂಡಾಗ, ಹಿಂದಿ ಅಥವಾ ಇಂಗ್ಲಿಷ್ ಗೊತ್ತಿಲ್ಲದ ಗ್ರಾಹಕರ ಪಾಡೇನು? ವಲಸಿಗರ ಭಾಷೆಯನ್ನು ಕಲಿತು ಅವರೊಂದಿಗೆ ಸಂವಹನ ನಡೆಸುವ ಪರಿಸ್ಥಿತಿ ರೂಪುಗೊಳ್ಳಲು ನಾವು ಆಸ್ಪದ ಕಲ್ಪಿಸುತ್ತಿದ್ದೇವೆ. ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಾದೇಶಿಕ ಭಾಷೆಗಳನ್ನು ನಿರ್ಲಕ್ಷಿಸಲು ಅವಕಾಶವಿಲ್ಲ. ಆದರೆ, ಕೆಲವು ರಾಜಕಾರಣಿಗಳ ಪೊಳ್ಳು ಪ್ರತಿಷ್ಠೆ ಹಾಗೂ ಹಿಂದಿಯ ವ್ಯಸನದಿಂದಾಗಿ ಹಿಂದಿಯೇತರ ಭಾಷೆಗಳು ಕಡೆಗಣನೆಗೊಳಗಾಗುತ್ತಿವೆ. ಈ ಅವಗಣನೆಯನ್ನು ನಿರ್ಲಕ್ಷಿಸುವ ನಾವು, ಗೂಗಲ್‌ನ ಅವಿವೇಕವನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಕನ್ನಡದ ಹಿತಾಸಕ್ತಿಗೆ ಆಗಬೇಕಾದುದನ್ನು ಎನ್ನುವುದು ನಮಗೆ ಸ್ಪಷ್ಟವಿಲ್ಲದೆ ಹೋದರೆ, ಕನ್ನಡದ ಏಳಿಗೆ ಮಾತುಗಾರಿಕೆಗೆ ಸೀಮಿತವಾಗುತ್ತದೆಯೇ ಹೊರತು ಕಾರ್ಯರೂಪಕ್ಕೆ ಬರುವುದಿಲ್ಲ.

■ **ರಘುನಾಥ ಚ.ಹ.**




ಈಶ್ವರ್